**SCCH-8** **MVC : 7129/2023**
**PW-2 : Dr. B. Ramesh**

**ದಿನಾಂಕಃ 22-01-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 1ನೇ ಎದುರುದಾರರ ಪರ ಮಾನ್ಯ ವಕೀಲರಿಂದ.**

ನಾನು ಅರ್ಜಿದಾರರಿಗೆ ಯಾವುದೇ ಚಿಕಿತ್ಸೆಯನ್ನು ನೀಡಿರುವುದಿಲ್ಲ ಹಾಗೂ ಚಿಕಿತ್ಸೆ ನೀಡಿದ ವೈದ್ಯರ ಸಲಹೆಯನ್ನು ಪಡೆದಿರುವುದಿಲ್ಲ. ಮೂಳೆಮುರಿತ ಕೂಡಿಕೊಂಡಿದ್ದು, ಅರ್ಜಿದಾರರು ಯಾವುದೇ ಸಹಾಯವಿಲ್ಲದೇ ನಡೆದಾಡುತ್ತಾರೆ. ಲಿಂಬ್ ಕುಂಟಿತವಾಗಿರುವುದಿಲ್ಲ. ಒಳಜೋಡಣೆಯನ್ನು ಈಗ ತೆಗೆಯಬಹುದು. ಒಳಜೋಡಣೆಯನ್ನು ತೆಗೆದ ನಂತರ ಅರ್ಜಿದಾರರಿಗೆ ಇರುವ ತೊಂದರೆಗಳಲ್ಲಿ ವ್ಯತ್ಯಾಸ ಆಗುವ ಸಾಧ್ಯತೆ ಇರುತ್ತದೆ. ನನ್ನ ಪ್ರಮಾಣ ಪತ್ರದಲ್ಲಿ ಅಂಗನ್ಯೂನ್ಯತೆಯ ಸಂಬಂಧ ಲೆಕ್ಕಾಚಾರವನ್ನು ನಮೂದು ಮಾಡಿರುವುದಿಲ್ಲ ಆದರೆ ಹೊರರೋಗಿ ದಾಖಲೆಯಲ್ಲಿ ನಮೂದು ಮಾಡಿರುತ್ತೇನೆ. ಅರ್ಜಿದಾರರ ದೈಹಿಕ ಅಂಗನ್ಯೂನ್ಯತೆಯನ್ನು ಮಾತ್ರ ಅಂದಾಜು ಮಾಡಿರುತ್ತೇನೆ. ಅರ್ಜಿದಾರರು ತಮ್ಮ ದೈನಂದಿನ ಕೆಲಸವನ್ನು ತೊಂದರೆಯಿಂದ ಮಾಡಿಕೊಳ್ಳಬಹುದು. ದಾಖಲೆಗಳಲ್ಲಿ ಎಲ್ಲಿಯೂ ಸಹಾ ತೆರದ ಗಾಯವಾ ಅಥವಾ ಪುಡಿಪುಡಿಯಾದ ಮುಳೆ ಮುರಿತವೇ ಎಂದು ನಮೂದು ಇರುವುದಿಲ್ಲ ಎಂದರೆ ಸರಿ. ನಾನು ಹಿಂದಿನ ಎಕ್ಸ್ -ರೇಗಳನ್ನು ಪರಿಶೀಲಿಸಿರುವುದಿಲ್ಲ. ಈಗ ನಾನು ಹಾಜರುಪಡಿಸಿರುವ ಎಕ್ಸ್ -ರೇಯ ಮೂಲಕ ಮೂಳೆ ಮುರಿತ ಯಾವ ರೀತಿಯದ್ದು ಎಂದು ಹೇಳಲು ಆಗುವುದಿಲ್ಲ.

ಅರ್ಜಿದಾರರು ಮುಂದುವರಿದ ಚಿಕಿತ್ಸೆ ಪಡೆದ ಬಗೆಗಿನ ದಾಖಲೆಗಳನ್ನು ನನ್ನ ಪರಿಶೀಲನೆಗೆ ನೀಡಿರಲಿಲ್ಲ. ಸಾಮಾನ್ಯವಾಗಿ ಒಬ್ಬ ವ್ಯಕ್ತಿಗೆ ಮೂಳೆ ಮುರಿತದಿಂದ ತೊಂದರೆ ಉಂಟಾದಲ್ಲಿ ಚಿಕಿತ್ಸೆ ನೀಡಿದ ವೈದ್ಯರನ್ನು ಸಂಪರ್ಕಿಸುವಂತೆ ಸಲಹೆ ನೀಡಲಾಗುತ್ತದೆ ಎಂದರೆ ಸರಿ. ಅರ್ಜಿದಾರರು ಭೌತಿಕ ಚಿಕಿತ್ಸೆಗೆ ಒಳಪಟ್ಟಿದ್ದರೋ ಇಲ್ಲವೋ ನನಗೆ ಮಾಹಿತಿ ಇಲ್ಲ. ಒಂದು ವೇಳೆ ಗಾಯಾಳುವಿಗೆ ಮುಳೆ ಮುರಿತದಿಂದ ತೊಂದರೆ ಇದ್ದಲ್ಲಿ ಸೂಕ್ತವಾದ ಭೌತಿಕ ಚಿಕಿತ್ಸೆಗೆ ಒಳಪಡುವಂತೆ ಸಲಹೆ ನೀಡಲಾಗುತ್ತದೆ ಎಂದರೆ ಸರಿ. ಅರ್ಜಿದಾರರಿಗೆ ಮೂಳೆ ಮುರಿತದಿಂದ ವೈತಿರಿಕ್ತ ಪರಿಣಾಮ ಉಂಟಾಗಿದಯೋ ಇಲ್ಲವೋ ಎಂಬ ಬಗ್ಗೆ ಹಳೆಯ ವೈದ್ಯಕೀಯ ದಾಖಲೆಗಳನ್ನು ನಾನು ಪರಿಶೀಲಿಸಿರುವುದಿಲ್ಲ. ಮೂಳೆ ಮುರಿತ ಕೂಡಿಕೊಳ್ಳಲು ಸಾಮಾನ್ಯವಾಗಿ 16 -20 ವಾರ

ಸಮಯಾವಕಾಶ ಬೇಕಾಗುತ್ತದೆ. ಅರ್ಜಿದಾರರಿಗೆ ಮೂಳೆಯು ಸಹಜ ಸ್ಥಿತಿಯಲ್ಲಿಯೇ ಕೂಡಿಕೊಂಡಿರುತ್ತದೆ ಎಂದರೆ ಸರಿ. ಅರ್ಜಿದಾರರ ಉದ್ಯೋಗದ ಬಗ್ಗೆ ನನಗೆ ಮಾಹಿತಿ ಇಲ್ಲ. ನಾನು ಅರ್ಜಿದಾರರ ಔದ್ಯೋಗಿಕ ಅಂಗ ನ್ಯೂನ್ಯತೆಯನ್ನು ಅಳದಿರುವುದಿಲ್ಲ ಎಂದರೆ ಸರಿ. ನಾನು ಅರ್ಜಿದಾರರ ಹಳೆಯ ಕಡತಗಳನ್ನು ಪರಿಶೀಲಿಸಿರುವುದಿಲ್ಲ. ಸಾಮಾನ್ಯವಾಗಿ ಪ್ರಸ್ತುತ ಸಮಸ್ಯೆಗಳು ಇದ್ದಲ್ಲಿ ಅದನ್ನು ಗಾಯಾಳುವಿನ ಮುಂದುವರಿದ ಚಿಕಿತ್ಸೆಯ ದಾಖಲೆಯಲ್ಲಿ ನಮೂದು ಮಾಡಲಾಗಿರುತ್ತದೆ ಎಂದರೆ ಸರಿ.

ಮೂಳೆ ಮುರಿತ ಉಂಟಾದ ವ್ಯಕ್ತಿಗೆ ನಿರ್ದಿಷ್ಟ ಅವಧಿಯ ವರೆಗೆ ಸದರಿ ಅಂಗದ ಚಲನ ವಲನ ಮಾಡಬಾರದು ಎಂದು ಸಲಹೆ ನೀಡಲಾಗುತ್ತದೆ ಎಂದರೆ ಸರಿ. ಮೂಳೆ ಮುರಿತವಾದ ಅಂಗವನ್ನು ಕೆಲವು ಸಮಯ ಚಲನ ವಲನ ಮಾಡದಿದ್ದಲ್ಲಿ ಮಾಂಸಕಂಡಗಳು ಗಟ್ಟಿಯಾಗಿ ತೊಂದರೆ ಉಂಟಾಗುತ್ತದೆ ಎಂದರೆ ಸರಿ. ವೈದ್ಯರ ಸಲಹೆ ಮೇರೆಗೆ ಮೂಳೆ ಮುರಿತದ ಅಂಗಗಳು ಪದೇ ಪದೇ ಉಪಯೋಗಸಲು ಪ್ರಾರಂಭಿಸಿ ನಿರ್ದಿಷ್ಟ ಸಮಯದಲ್ಲಿ ಸ್ನಾಯುಗಳ ಶಕ್ತಿ ವೃದ್ಧಿಯಾಗುತ್ತದೆ ಎಂದರೆ ಸರಿ. ಅರ್ಜಿದಾರರನ್ನು ಮೂಳೆ ಮುರಿತ ಕೂಡಿಕೊಂಡು ಒಳಜೋಡಣೆ ತೆಗೆದ ನಂತರ ಭೌತಿಕ ಚಿಕಿತ್ಸೆಗೆ ಸಲಹೆ ನೀಡಲಾಗುತ್ತದೆ ಎಂದರೆ ಸಾಕ್ಷಿಯು ಗಾಯಾಳುವಿನ ಪರಿಸ್ಥಿತಿಯ ಆಧಾರದ ಮೇಲೆ ಭೌತಿಕ ಚಿಕಿತ್ಸೆ ಅಗತ್ಯವಿದೆಯೋ ಇಲ್ಲವೋ ಎಂಬುದನ್ನು ನಿರ್ಧರಿಸಲಾಗುತ್ತದೆ. ಒಳಜೋಡಣೆ ತೆಗೆದ ನಂತರ ಗಾಯಾಳುವಿಗೆ ಇರುವ ಸಮಸ್ಯೆಗಳು ತಿಳಿದುಬಂದು ಸೂಕ್ತ ಚಿಕಿತ್ಸೆ ನೀಡಬಹದು ಎಂದರೆ ಸರಿ.

ವಿಕ್ಟೋರಿಯಾ ಆಸ್ಪತ್ರೆಯಲ್ಲಿ ವೈದ್ಯಕೀಯ ಮಂಡಳಿ ಇದ್ದು ಅಂಗನ್ಯೂನ್ಯತೆಯನ್ನು ನಿರ್ಧರಿಸಲಾಗುತ್ತದೆ ಎಂದರೆ ಸರಿ. ನಾನು ಅರ್ಜಿದಾರರಿಗೆ ಚಿಕಿತ್ಸೆ ನೀಡದ ಕಾರಣ ಅವರನ್ನು ವೈದ್ಯಕೀಯ ಮಂಡಳಿಗೆ ಕಳುಹಿಸಿಕೊಡಬಹುದಿತ್ತು ಎಂದರೆ ಸಾಕ್ಷಿಯು ಅವಶ್ಯಕತೆ ಇರುವುದಿಲ್ಲ ಎಂದು ನುಡಿಯುತ್ತಾರೆ.

ಅರ್ಜಿದಾರರ ಜೊತೆ ಶಾಮೀಲಾಗಿ ಅಂಗನ್ಯೂನ್ಯತೆಯನ್ನು ಹೆಚ್ಚಾಗಿ ನಿರ್ಧರಿಸಿರುತ್ತೇನೆ ಎಂದರೆ ಸರಿಯಲ್ಲ. ಒಳಜೋಡಣೆಯನ್ನು ತೆಗೆಯುವ ಚಿಕಿತ್ಸೆಯನ್ನು ಸರ್ಕಾರಿ ಆಸ್ಪತ್ರೆಯಲ್ಲಿಯೂ

ಸಹಾ ಮಾಡಿಸಬಹುದು ಎಂದರೆ ಸರಿ. ಅರ್ಜಿದಾರರಿಗೆ ಸಹಾಯ ಮಾಡಲು ಹೆಚ್ಚಿನ ನ್ಯೂನ್ಯತೆಯನ್ನು ನಿರ್ಧರಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**

**(ಓ.ಹೇ.ಕೇ.ಸ.ಇ.)**

**ಸದಸ್ಯರು, ಎಂ.ಎ.ಸಿ.ಟಿ., ಎಸ್‌ಸಿಸಿಹೆಚ್-08**
**ಬೆಂಗಳೂರು.**